ಯಾವ ರೀತಿಯ ತೊಂದರೆಯಾಗಿದೆ ಅಂದರೆ ಸುಮಾರು ಒಂದೂವರೆ ಸಾವಿರಕ್ಕಿಂತ ಹೆಚ್ಚು ಐ.ಪಿ. ಸೆಟ್ಟುಗಳು ವಿದ್ಯುತ್ ಪೂರೈಕೆಯು ಸರಿಯಾಗಿ ಇಲ್ಲದ ಕಾರಣ ಸುಟ್ಟು ಹೋಗಿ ರೈತರ ಭಾರೀ ತೊಂದರೆಗೆ ಈಡಾಗಿದ್ದಾರೆ. ಅದಲ್ಲದೆ ಬೆಳೆಗಳು ಕೂಡ ನಾಶವಾಗಿದೆ ಆದಕ್ಕೋಸ್ಕರವಾಗಿ ನಮ್ಮ ಕ್ಷೇತ್ರದಿಂದ ನಿಯೋಗವೊಂದನ್ನು ತಂದು ಮಾನ್ಯ ಸಚಿವರಿಗೆ ಹಾಗೂ ಮಾನ್ಯ ಮುಖ್ಯಮಂತ್ರಿಗಳಿಗೆ ಭೇಟಿಯಾಗಿ ಹೇಳಿದಾಗ ತಾತ್ಪೂರ್ತಿಕವಾಗಿ ಒಂದು ವ್ಯವಸ್ಥೆಯನ್ನು ಮಾಡಿದರು. ಆದರೆ ಮತ್ತೆ ಈಗ ಯಥಾಪ್ರಕಾರವಾಗಿ ಇದೆ ಅದೇ ರೀತಿಯ ತೊಂದರೆಯನ್ನು ರೈತರು ಅನುಭವಿಸುತ್ತಾ ಇದ್ದಾರೆ. ಆದ್ದರಿಂದ ಮಾನ್ಯ ಸಚಿವರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ತ್ವರಿತವಾಗಿ ಹಾಗೂ ಶಾಶ್ವತವಾಗಿ ನಮ್ಮ ಕ್ಷೇತ್ರಕ್ಕೆ ಶಾಶ್ವತವಾದಂಥ ಪರಿಹಾರವನ್ನು ಮಾಡಿಕೊಡುವ ವ್ಯವಸ್ಥೆಯನ್ನು ಮಾಡುತ್ತೀರಾ?

ಶ್ರೀ ಎಂ. ರಾಮಪ್ಪ : ನಾವು ಈಗಾಗಲೇ ಆಲ್ಲಿಗೆ ಬಸವನ ಬಾಗೇವಾಡಿಯಿಂದ ಲೈನ್ ಕೊಟ್ಟಿದ್ದೇವೆ. ತ್ವರಿತಗತಿಯಲ್ಲಿ ಸರಿಯಾಗಿ ವಿದ್ಯುಚ್ಛಕ್ತಿ ಒದಗಿಸುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡುತ್ತಾ ಇದ್ದೇವೆ. ಆದಕ್ಕಾಗಿ ಕೆಲವು ಯೋಜನೆಗಳನ್ನು ಕೂಡ ಹಾಕಿಕೊಂಡಿದ್ದೇವೆ ಈ ಒಂದು ವರ್ಷದಲ್ಲಿ ಆ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಐನಾಪುರ್ ಮನೋಹರ ಉಮಾಕಾಂತ : ಒಂದು ವರ್ಷದೊಳಗಾಗಿ ಮಾನ್ಯ ಸಚಿವರು ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ನಾನು ಹೇಳಿದ ಪ್ರಶ್ನೆಗೆ "No specific instances of burning of thousands of I.P. sets due to low voltage in the Ballolli Costituency of Indi Taluk has come to the notice. I request the Hon. Minister to look into the matter through the concern authorities properly so that the Government will come to know what kind of problems are faced by poor Agriculturists.

ಶ್ರೀ ಎಂ. ರಾಮಪ್ಪ : ಆ ಬಗ್ಗೆ ನಮಗೆ ಮಾಹಿತಿ ಸಿಕ್ಕಿಲ್ಲ ಸಿಕ್ಕಿದರೆ ನೋಡೋಣ. ಈಗ ನಮಗೆ ಯಾವ ಕಂಪ್ಲೆಂಟ್ಸ್ ಕೂಡ ಬಂದಿಲ್ಲ ಆದರೆ ನಮ್ಮ ಸದಸ್ಯರ ಕಳಕಳಿಯು ನಮಗೆ ಅರ್ಥವಾಗಿ ಆದಷ್ಟು ಬೇಗನೆ ಆ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಪಡಿತರ ಸಮಿತಿಯ ರಚನೆ

460 - ಶ್ರೀ ಡಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಾಲ್ಲೂಕಿನಲ್ಲಿ ಪಡಿತರ ವ್ಯವಸ್ಥೆ ಭದ್ರಪಡಿಸಲು ಆಹಾರ ವಿತರಣೆಗಾಗಿ ಮತ್ತು ಅದರ ಮೇಲ್ವಿಚಾರಣೆಗಾಗಿ ಸಮಿತಿಗಳನ್ನು ರಚಿಸುವುದು ಸರ್ಕಾರದ ಗಮನದಲ್ಲಿದೆಯೇ?

ಆ) ಹಾಗಿದ್ದಲ್ಲಿ ಅದಕ್ಕೆ ಕಾರ್ಯಸೂಚಿ ಏನು ಮತ್ತು ಯಾವಾಗ ರಚಿಸಲಾಗುವುದು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಪಡಿತರ ವ್ಯವಸ್ಥೆ ಮತ್ತು ನ್ಯಾಯಬೆಲೆ ಅಂಗಡಿಗಳ ಮೇಲ್ವಿಚಾರಣೆ ನೋಡಿಕೊಳ್ಳಲು ಪ್ರತಿ ತಾಲ್ಲೂಕಿನಲ್ಲೂ ಈಗಾಗಲೇ ಆಯಾ ಕ್ಷೇತ್ರದ ವಿಧಾನಸಭೆಯ ಸದಸ್ಯರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪರಿಷತ್ ಸದಸ್ಯರು ಮತ್ತು ಮಂಡಲ ಪ್ರಧಾನರು

ಸದಸ್ಯರಾಗಿಯೂ ಉಪ ವಿಭಾಗಾಧಿಕಾರಿಗಳು ಸಂಚಾಲಕರಾಗಿರುವ ಜಾಗೃತ ಸಮಿತಿಗಳನ್ನು. ರಚಿಸಲಾಗಿದೆ. ಗ್ರಾಮ ಪ್ರದೇಶಗಳಲ್ಲಿ ಮಂಡಲ ಮಟ್ಟದಲ್ಲಿ ಜಿಲ್ಲಾ ಕೇಂದ್ರಗಳಲ್ಲಿ ನಗರಸಭೆ ಅಥವಾ ಪುರಸಭೆಗಳ ವಿಭಾಗಗಳ ಮಟ್ಟದಲ್ಲಿ ಜಾಗೃತ ಸಮಿತಿಗಳನ್ನು ರಚಿಸಲು ಸರ್ಕಾರ ಪರಿಶೀಲಿಸುತ್ತಿದೆ.

ಆ)

1. ನ್ಯಾಯಬೆಲೆ ಅಂಗಡಿಗಳು ಇಲಾಖೆಯು ನಿಗಧಿಪಡಿಸಿದ ವೇಳೆಯಲ್ಲಿ ಕಾರ್ಯನಿರ್ವಹಿಸುತ್ತಿದೆಯೇ ಅಥವಾ ಇಲ್ಲವೆ ಎಂಬುದನ್ನು ಪರಿಶೀಲಿಸುವುದು.
2. ನ್ಯಾಯಬೆಲೆ ಅಂಗಡಿಗಳಲ್ಲಿ ಆಹಾರ ದಾಸ್ತಾನುಗಳು ತಿಂಗಳ ಪೂರ್ತಿ ಕೊರತೆ ಇಲ್ಲದಂತೆ ದೊರೆಯುವ ಬಗ್ಗೆ ಪರಿಶೀಲಿಸುವುದು.
3. ಇಲಾಖೆಯ ಅಧಿಕಾರಿಗಳು ನಿಗಧಿಪಡಿಸಿದ ದಿನಾಂಕಗಳಲ್ಲಿ ನ್ಯಾಯಬೆಲೆ ಅಂಗಡಿಯವರು -ಆಹಾರ ದಾಸ್ತಾನುಗಳನ್ನು ಎತ್ತುವಳಿ ಮಾಡುವ ಬಗ್ಗೆ ಪರಿಶೀಲಿಸುವುದು
4. ಇಲಾಖೆಯ ಪ್ರತಿ ತಿಂಗಳು ನಿಗಧಿಪಡಿಸಿದ ಪ್ರಮಾಣದಲ್ಲಿ ಪಡಿತರ ಚೀಟಿದಾರರಿಗೆ ಆಹಾರ ಧಾನ್ಯಗಳನ್ನು ನ್ಯಾಯಬೆಲೆ ಅಂಗಡಿಯವರು ವಿತರಣೆ ಮಾಡುತ್ತಿದ್ದಾರೆಯೇ? ಎನ್ನುವ ಬಗ್ಗೆ ಪರಿಶೀಲಿಸುವುದು
5. ನಕಲಿ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಲು ಇಲಾಖೆಯ ಸಿಬ್ಬಂದಿಗೆ ಸಹಾಯ ಮಾಡುವುದು.
6. ನ್ಯಾಯಬೆಲೆ ಅಂಗಡಿಯವರು ವಿತರಣೆ ಮಾಡುವ ಆಹಾರ ಧಾನ್ಯಗಳ ತೂಕ ಮತ್ತು ಅಳತೆ ಸರಿಯಾಗಿದೆಯೇ ಎನ್ನುವ ಬಗ್ಗೆ ಪರಿಶೀಲಿಸುವುದು.
7. ಪಡಿತರ ಚೀಟಿದಾರರಿಗೆ ನ್ಯಾಯಬೆಲೆ ಅಂಗಡಿಯವರೊಂದಿಗಿರುವ ಸಮಸ್ಯೆಗಳನ್ನು ವಿಚಾರಣೆ ಮಾಡಿ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರುವುದು.

ಶ್ರೀ ಡಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ ನನ್ನ ಪ್ರಶ್ನೆ ತಾಲ್ಲೂಕಿನಲ್ಲಿ ಪಡಿತರ ವ್ಯವಸ್ಥೆಯನ್ನು ಭದ್ರ ಪಡಿಸಲು ಆಹಾರ ವಿತರಣೆ ಮತ್ತು ಮೇಲ್ವಿಚಾರಣೆಗಾಗಿ ಸಮಿತಿಗಳನ್ನು ರಚಿಸುವುದು ಸರಕಾರದ ಗಮನದಲ್ಲಿದೆಯೇ? ಎಂಬುದು ಅದಕ್ಕೆ ಅವರು ಉತ್ತರದಲ್ಲಿ ಈಗಾಗಲೇ ಸಮಿತಿಗಳನ್ನು ರಚಿಸಲಾಗಿದೆ ಎಂಬ ಅಭಿಪ್ರಾಯ ಬರುವಂಥ ಉತ್ತರವನ್ನು ಕೊಟ್ಟಿದ್ದಾರೆ. ಇದರಲ್ಲಿ ಸದಸ್ಯರು ಯಾರ್ಯಾರು ಎಂದು ಹೇಳಿದ್ದಕ್ಕೆ ಜಿಲ್ಲಾಪರಿಷತ್ ಸದಸ್ಯರು ಮತ್ತು ಮಂಡಲ ಪಂಚಾಯತ್ ಪ್ರಧಾನರು ಮತ್ತು ಸದಸ್ಯರುಗಳನ್ನು ಒಳಗೊಂಡಂತೆ ಒಂದು ಸಮಿತಿಯನ್ನು ವಿಧಾನ ಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ ಎಂಬ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಈಗ ಮಂಡಲ ಪಂಚಾಯತ್ ಮತ್ತು ಜಿಲ್ಲಾಪರಿಷತ್‌ಗಳು ಅಸ್ತಿತ್ವದಲ್ಲಿ ಇಲ್ಲ. ಅವುಗಳು ಅಸ್ತಿತ್ವದಲ್ಲಿದ್ದಾಗಲೂ ಕೂಡ ಇಂಥ ಸಮಿತಿಯು ಸಭೆಯನ್ನು ಕರೆದುದು ನನಗೆ ಗೊತ್ತಿಲ್ಲ ಹಾಗೆ ಯಾವುದೇ ಸಭೆಯನ್ನು ಕರೆದಿಲ್ಲ ನೀವು ಕೊಟ್ಟಿರತಕ್ಕಂಥ ಕಾರ್ಯಸೂಚಿ ಏನಿದೆ ಅದರ ಪ್ರಕಾರ ಸಮಿತಿಗೆ ಹೆಚ್ಚಿನ ಒಂದು ಜವಾಬ್ದಾರಿಯು ಇದೆ. ಅದನ್ನು ನಿರ್ವಹಣೆ ಮಾಡಬೇಕಾದರೆ ಈಗಾಗಲೇ ಮಂಡಲ ಪಂಚಾಯಿತ್ ಮತ್ತು ಜಿಲ್ಲಾಪರಿಷತ್‌ಗಳು ಅಸ್ತಿತ್ವದಲ್ಲಿ ಇಲ್ಲ. ಇಂಥ ಸಂದರ್ಭದಲ್ಲಿ ಇವೊತ್ತು ಹೊಸದಾಗಿ ಸಮಿತಿಯನ್ನು ಮಾಡುವಂಥ ಒತ್ತಾಯ ಪೂರ್ವಕ ಪರಿಸ್ಥಿತಿ ಇದ್ದು ಅದನ್ನು ಮಾಡಬೇಕಾಗಿದೆ. ಆ ಬಗ್ಗೆ ಸಚಿವರು ಒಂದು ಭರವಸೆಯನ್ನು ಕೊಡುತ್ತಾರೆಯೇ? ಎಂದು ಕೇಳ ಬಯಸುತ್ತೇನೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ಮಾನ್ಯ ಅಧ್ಯಕ್ಷರೆ ಈ ಇಲಾಖೆಯು ನನಗೆ ಬರುವುದಕ್ಕಿಂತ ಮುಂಚಿತವಾಗಿ ಜುಲೈ 1990ರಲ್ಲಿ ಆಹಾರ ನಿರ್ದೇಶಕರಿಗೆ ಸೂಚನೆ ನೀಡಿ ಅವರು ಜಿಲ್ಲಾಧಿಕಾರಿಯವರೊಂದಿಗೆ ಸಮಾಲೋಚನೆ ಮಾಡಿ ಸಮಿತಿಯನ್ನು ಮಾಡಿ ಎಂದು ಆವೊತ್ತಿನ ಮಂತ್ರಿಯವರು ಒಂದು ತೀರ್ಮಾನವನ್ನು ಕೈಗೊಂಡಿದ್ದರು. ಆ ಪ್ರಕಾರ ಒಂದು ಸಮಿತಿಯು ಆಗಬೇಕೆಂದು ಮಾಡಿದ್ದಾರೆ. ಈಗ ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯತ್ ಅಸ್ತಿತ್ವದಲ್ಲಿ ಇಲ್ಲದಿರುವುದರಿಂದ ಆ ಹಿನ್ನಲೆಯಲ್ಲಿ ಯಾವರೀತಿಯಲ್ಲಿ ಮಾರ್ಪಾಡು ಮಾಡುತ್ತೀರಿ ಎಂಬ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಚುರುಕುಗೊಳಿಸಬೇಕು ಮತ್ತು ಬಿಗಿಗೊಳಿಸಬೇಕು ಅಲ್ಲಿಯ ವ್ಯವಹಾರಗಳು ಚೆನ್ನಾಗಿ ನಡೆಯಬೇಕು ಎನ್ನುವುದರಲ್ಲಿ ಕೇಂದ್ರ ಸರ್ಕಾರ ಕೂಡ ರಾಜ್ಯಸರ್ಕಾರಗಳಿಗೆ ನೇರವಾಗಿ ಹೇಳುತ್ತಿದೆ ನಾವೂ ಪ್ರಯತ್ನ ಮಾಡುತ್ತಿದ್ದೇವೆ. ನನಗೆ ಬಂದ ಮಾಹಿತಿ ಪ್ರಕಾರ ಸುಮಾರು 87-88 ಕ್ಷೇತ್ರಗಳಲ್ಲಿ ಮಾತ್ರ ಈ ಸಮಿಗಳು ರಚನೆಯಾಗಿದೆ ಬೇರೆ ಕಡೆ ಆಗಿಲ್ಲ ಇವತ್ತಿನ ಬದಲಾವಣೆ ಗಮನಿಸಿ ಆ ಸಮಿತಿಗಳನ್ನು ತಾಲ್ಲೂಕು ಮಟ್ಟದಲ್ಲಿ ವ್ಯಾಪಕವಾಗಿ ಮಡಬೇಕೇ ಎಂದು ವಿಚಾರ ಮಾಡುತ್ತಿದ್ದೇವೆ ಜಿಲ್ಲಾಮಟ್ಟದಲ್ಲಿ ಮತ್ತು ರಾಜ್ಯಮಟ್ಟದಲ್ಲಿ ಮೂರು ಹಂತದಲ್ಲಿ ಆಹಾರ ಸಲಹಾ ಸಮಿತಿಗಳನ್ನು ಮಾಡಬೇಕೆಂದು ಸರ್ಕಾರ ತೀವ್ರವಾಗಿ ಪರಿಶೀಲಿಸುತ್ತಿದೆ. 1992ರ ಏಪ್ರಿಲ್ ತಿಂಗಳ ನಂತರ ಈ ಸಮಿತಿಗಳನ್ನು ಪುನರ್‌ರಚನೆ ಮಾಡುತ್ತೇವೆ. ಬಹಳ ಕ್ರಮಬದ್ಧವಾಗಿ ನಿಮ್ಮೆಲ್ಲರ ಅಭಿಪ್ರಾಯಗಳನ್ನು ಪಡೆದು ಮಾಡುತ್ತೇವೆಂದು ಭರವಸೆ ಕೊಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಅಧ್ಯಕ್ಷರೇ ಇದರಲ್ಲಿ ಒಂದು 224 ಕ್ಷೇತ್ರಗಳಲ್ಲಿ ಆಯಾ ವಿಧಾನಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ಮಾಡುತ್ತೇವೆಂದು ಅಭಿಪ್ರಾಯ ಹೊಂದಿದ್ದೀರಿ. ಅದರಲ್ಲಿ ಯಾವರೀತಿಯ ಬದಲಾವಣೆಯೂ ಆಗಬಾರದು ಏಕೆಂದರೆ ಈಗ ನೀವು ಕೊಟ್ಟಿರುವ ಕಾರ್ಯಸೂಚಿಯನ್ನು ಬಹಳ ಜವಾಬ್ದಾರಿಯಿಂದ ನಿರ್ವಹಿಸಬೇಕಾಗುತ್ತದೆ. ಆಯಾ ಕ್ಷೇತ್ರದ ಶಾಸಕರಾಗಲೀ ಯಾರೇ ಆಗಲಿ ಅವರು ಈ ಬಗ್ಗೆ ಕಣ್ಣಿಟ್ಟು ನೋಡುವಂತಹ ಕಾಲ ಇದು ಬಂದಿದೆ. ಫುಡ್ ಅಲಾಟ್‌ಮೆಂಟಿನಿಂದ ಹಿಡಿದು ಅದು ವಿತರಣೆಯಾಗುವವರೆಗೂ ಕೂಡ ಎಷ್ಟು ತರದ ಅವ್ಯವಹಾರ ಭ್ರಷ್ಟಾಚಾರಗಳಿರುತ್ತವೆಂಬುದು ನಿಮಗೆ ಗೊತ್ತಿಲ್ಲದೇ ಇರುವುದೇನಲ್ಲ ಅದನ್ನು ಸ್ವಲ್ಪಮಟ್ಟಿಗೆ ಕಡಿವಾಣ ಹಾಕಬೇಕಾದರೆ ಇಂದು ಆಯಾ ಕ್ಷೇತ್ರ ಮಟ್ಟದಲ್ಲಿ ಸಮಿತಿಗಳು ಬಹಳ ಬೇಗನೇ ಆಗಲೇಬೇಕು. ತಾವು ನಿರ್ದಿಷ್ಟವಾಗಿ ಎಂದು ಮಾಡುತ್ತೀರಿ ಎಂದು ಆಶ್ವಾಸನೆ ಕೊಟ್ಟರೆ ಬಹಳ ಒಳ್ಳೆಯದಾಗುತ್ತದೆ. ರಾಜ್ಯಪಾಲರೂ ಕೂಡ ತಮ್ಮ ಭಾಷಣದಲ್ಲಿ ಇದನ್ನು ಹೇಳಿದ್ದಾರೆ. ಆ ಸಿಸ್ಟಮನ್ನು ಜನಗಳ ಮನೆ ಬಾಗಿಲಿಗೆ ತಗೊಂಡುಹೋಗಬೇಕೆಂಬ ಉದ್ದೇಶ ತಾವು ಇಟ್ಟುಕೊಂಡಿರಬೇಕಾದರೆ ವ್ಯವಸ್ಥಿತವಾಗಿ ಹೊಸದಾಗಿ ಏಪ್ರಿಲ್‌ಗೆ ನೀವು ಕಾರ್ಡ್‌ಗಳನ್ನು ಕೊಡಬೇಕೆಂದು ಪ್ರಾರಂಭ ಮಾಡುತ್ತಿದ್ದೀರಿ ಅದು ನ್ಯಾಯವಾಗಿ ಮಾಡಬೇಕಾದರೆ ಅದನ್ನು ಈ ಸಮಿತಿಗಳ ಮುಖೇನವೇ ನೀವು ಮಾಡಬೇಕಾಗುತ್ತದೆ. ಅದನ್ನು ಯಾವಾಗ ಮಾಡುತ್ತೀರಿ ಎನ್ನುವ ಬಗ್ಗೆ ನಿರ್ದಿಷ್ಟವಾಗಿ ಉತ್ತರ ಕೊಡಬೇಕು.

ಶ್ರೀ ಟಿ.ಎನ್. ನರಸಿಂಹಮೂರ್ತಿ : ಇಂದು ವಿತರಣಾ ವ್ಯವಸ್ಥೆಯು ಎಲ್ಲಾ ರೀತಿಯಿಂದಲೂ ಸರಿಹೋಗಬೇಕೆಂಬ ತಮ್ಮ ಕಳಕಳಿ ಏನಿದೆ ಅದು ಎಲ್ಲರ ಅಭಿಪ್ರಾಯವೂ ಹೌದು. ನಾನು ಹೇಳುವುದೇನೆಂದರೆ ನಿಮ್ಮೆಲ್ಲರ ಸಹಕಾರದಿಂದ

ಮಾತ್ರ ಇದನ್ನು ನಾನು ಯಶಸ್ವಿಯಾಗಿ ಸಾಧಿಸುವುದಕ್ಕೆ ಸಾಧ್ಯ ಇದೆ ಜನಪ್ರತಿನಿಧಿಗಳಾದ ತಾವು ಕೊಡುವ ಸಲಹೆಗಳು ಕಾರ್ಯಕ್ರಮಗಳನ್ನು ಮನಸಿನಲ್ಲಿಟ್ಟುಕೊಂಡು ನಾನು ಕೆಲಸ ಮಾಡಲು ಸಿದ್ಧನಿದ್ದೇನೆಂದು ಭರವಸೆ ಕೊಡುತ್ತೇನೆ. ಆದರೆ ಇಂತಿಷ್ಟೇ ದಿನದಲ್ಲಿ ಮಾಡಿ ಎಂದು ಒತ್ತಾಯ ಮಾಡೋಕೆ ಹೋಗಬೇಡಿ ನನ್ನ ಕಾತುರತೆ ಆತುರತೆ ತಮಗೂ ಗೊತ್ತಿದೆ. ಆದಷ್ಟು ಬೇಗನೆ ಬಜೆಟ್ ಪಾಸಾದ ಈ ಸಮಿತಿಗಳನ್ನು ಮಾಡುತ್ತೇನೆಂದು ಭರವಸೆ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಇಂತಹ ಉತ್ತರ ಕೊಡುವ ಸಚಿವರನ್ನು ಎಂದೂ ನಾವು ಕಂಡಿಲ್ಲ. ಎಷ್ಟು ನಯವಾಗಿ ಗಂಭೀರವಾಗಿ ತಾವು ಹೇಳುವುದರಲ್ಲೇ ನಮಗೆ ಹೊಟ್ಟೆ ತುಂಬಿಹೋಗಿಬಿಡುತ್ತದೆ. ಇವರಿಗೆ ಪದ್ಮಶ್ರೀ ಕೊಡಲು ಕೇಂದ್ರಕ್ಕೆ ಬೇಕಾದರೆ ಹೇಳಬಹುದು.

ಶ್ರೀ ಜಯಚಂದ್ರ : ಅಧ್ಯಕ್ಷರೇ ತಮ್ಮ ಅನಿಸಿಕೆಗೆ ಅನುಗುಣವಾಗಿ ಉತ್ತರ ಕೊಡುವುದಲ್ಲ ನಿರ್ದಿಷ್ಟವಾಗಿ ನಾವು ಸಮಿತಿಗಳನ್ನು ಕ್ಷೇತ್ರಗಳ ಮಟ್ಟದಲ್ಲಿ ಮಾಡುತ್ತೇವೆ ಎನ್ನುವ ಉತ್ತರ ತಮ್ಮಿಂದ ಬರಲಿಲ್ಲ

ಶ್ರೀ ಟಿ.ಎನ್. ನರಸಿಂಹಮೂರ್ತಿ : ನಾನು ಆಗಲೇ ಹೇಳಿದ್ದೇನೆ ಕ್ಷೇತ್ರಗಳ ಮಟ್ಟದಲ್ಲಿ ಮಾತ್ರವಲ್ಲ ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲೂ ಕೂಡ ನಾವು ಪ್ರತಿಪಕ್ಷಗಳ ನಾಯಕರನ್ನು ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಂತ್ರಮಂಡಲದ ಸಭೆಯಲ್ಲಿ ನಾನು ಅನೌಪಚಾರಿಕವಾಗಿ ಮಾತಾಡಬೇಕಾಗುತ್ತದೆ. ಮುಖ್ಯಮಂತ್ರಿಗಳ ಜೊತೆ ಇದರ ಸಮಾಲೋಚನೆ ಮಾಡಬೇಕಾಗುತ್ತದೆ. ಅಂತಿಮವಾಗ ಬಜೆಟ್ ಪಾಸಾದ ಮೇಲೆ ಕಾದು ನೋಡಿ ಎಷ್ಟು ಜಾಗ್ರತೆ ಮಾಡುತ್ತೇನೆ ಎಂದು ಈಗಲೇ ಹೇಳಲು ನನಗೆ ಸಾಧ್ಯವಿಲ್ಲ.

ಬಸವ ಕಲ್ಯಾಣದಲ್ಲಿ ಸಿವಿಲ್ ಕೋರ್ಟ್

375 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ) ಮಾನ್ಯ ಕಾನೂನು ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣದಲ್ಲಿ ಪ್ರಸ್ತುತ ವರ್ಷ ಸಿವಿಲ್ ಕೋರ್ಟ್ ಸ್ಥಾಪಿಸುವ ಯೋಜನೆ ಸರ್ಕಾರಕ್ಕಿದೆಯೇ

ಆ) ಇದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು.

ಇ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾನೂನು ಸಚಿವರು) :

ಅ) ಹೌದು, ಇದರ ಬಗ್ಗೆ ಕರ್ನಾಟಕ ಉಚ್ಚನ್ಯಾಯಾಲಯದೊಡನೆ ಸಮಾಲೋಚಿಸಲಾಗುತ್ತಿದೆ.

ಆ) ಹೈಕೋರ್ಟಿನಿಂದ ಪ್ರಸ್ತಾವನೆಗಳು ಬಂದ ನಂತರ ದೊರೆಯುವ ರಾಜ್ಯದ ಸಂಪನ್ಮೂಲಗಳನ್ನು ಗಮನದಲ್ಲಿಟ್ಟುಕೊಂಡು ಆದ್ಯತೆಯ ಮೇರೆಗೆ ಕೋರ್ಟ್‌ಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು.

ಇ) ಮೇಲ್ಕಂಡ (ಅ) ಪ್ರಶ್ನೆಯ ಉತ್ತರದಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ : ಅಧ್ಯಕ್ಷರೇ ಬಸವ ಕಲ್ಯಾಣದಲ್ಲಿ ಸಿವಿಲ್ ಕೋರ್ಟ್ ಸ್ಥಾಪನೆ ಬಗ್ಗೆ ಸಚಿವರನ್ನು ಕೇಳಿದ್ದೆ ಅವರು ಉತ್ತರದಲ್ಲಿ ಏನು ಹೇಳಿದ್ದಾರೆಂದರೆ ಹೈಕೋರ್ಟಿನಿಂದ ಪ್ರಸ್ತಾವನೆ ಬಂದ ನಂತರ ದೊರೆಯುವ